ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ. ಎಫ್. ಸಿ.ರವರ ನ್ಯಾಯಾಲಯ, ಮಡಿಕೇರಿ.

# ಸಿ. ಸಿ. ಸಂಖ್ಯೆಃ 1096/20

ಪಿಡಬ್ಲ್ಯೂಃ - 7
ಸಿಡಬ್ಲ್ಯೂಃ 12
**ಹೆಸರುಃ ಡಾ. ಶೃತಿ**

ದಿನಾಂಕಃ18.12.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ-

ದಿಃ 02.10.2020 ರಂದು ನಾನು ತನಿಖಾಧಿಕಾರಿಗಳ ಮನವಿಯ ಮೇರೆಗೆ ನನ್ನ ಮುಂದೆ ಹಾಜರು ಪಡಿಸಿದ ಎರಡು ಗುದ್ದಲಿಗಳನ್ನು ಪರಿಶೀಲಿಸಿ ಅವುಗಳಿಂದ ಹಲ್ಲೆ ಮಾಡಿದರೆ ಚಾಸಾ-1 ಮತ್ತು 2 ರವರಿಗೆ ಆದ ಗಾಯಗಳು ಆಗುವ ಸಾಧ್ಯತೆ ಇದೆ ಎಂದು ನನ್ನ ಅಭಿಪ್ರಾಯವನ್ನು ನೀಡಿ ದಾಖಲೆ ಕೊಟ್ಟಿರುತ್ತೇನೆ. ಸದರಿ ದಾಖಲೆ ನಿಪಿ-9 ಎಂದು ಗುರುತಿಸಲ್ಪಟ್ಟಿದ್ದು, ಸಾಕ್ಷಿಯ ಸಹಿಯನ್ನು ನಿಪಿ-9(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಕಡತದಲ್ಲಿರುವ ಎರಡು ಎಕ್ಸರೇಗಳನ್ನು ನೋಡಿ ಗುರುತಿಸಿರುತ್ತಾರೆ. ಅವುಗಳನ್ನು ನಿಪಿ-10 ಮತ್ತು 11 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿ ಪರ ಶ್ರೀ. ಡಿ ಕೆ ಆರ್ ವಕೀಲರಿಂದಃ-

ಗುದ್ದಲಿಗಳನ್ನು ನಾನು ದಿಃ 02.10.2020 ರಂದು ಪರಿಶೀಲಿಸಿದ್ದೇನೆ. ನಿಪಿ-9 ರ ದಾಖಲೆಯನ್ನು ಹೆಚ್ ಸಿ 151 ಪೊಲೀಸರ ಸಮಕ್ಷಮ ಬರೆದಿರುತ್ತೇನೆ. ನಿಪಿ-9 ರಲ್ಲಿ ನಾನು ಯಾವ ಸ್ಥಳದಲ್ಲಿ ಯಾರ ಸಮಕ್ಷಮ ಗುದ್ದಲಿಗಳನ್ನು ಪರಿಶೀಲನೆ ಮಾಡಿರುವುದಾಗಿ ನಮೂದನೆ ಇಲ್ಲ ಎಂದರೆ ಸರಿ. ಗುದ್ದಲಿಗಳನ್ನು ಯಾವ ಪೊಲೀಸರು ತಂದು ನನ್ನ ಮುಂದೆ ಹಾಜರು ಪಡಿಸಿದ್ದಾರೆ ಎಂದು ನಿಪಿ-9 ರಲ್ಲಿ ನಮೂದು ಮಾಡಿರುವುದಿಲ್ಲ. ನಾನು ಪರಿಶೀಲನೆ ಮಾಡಿದ ಗುದ್ದಲಿಗಳು ಯಾವ

ಪ್ರಕರಣಕ್ಕೆ ಮತ್ತು ಯಾರಿಗೆ ಸಂಬಂಧಪಟ್ಟ ಹಾಗೂ ಯಾವ ಪಿ ಎಫ್ ಸಂಖ್ಯೆಗೆ ಒಳಪಟ್ಟ ಬಗ್ಗೆ ನಾನು ನಿಪಿ-9 ರಲ್ಲಿ ನಮೂದು ಮಾಡಿಲ್ಲ ಎಂದರೆ ಗಾಯಾಳುವಿನ ಹೆಸರುಗಳನ್ನು ಬರೆದಿದ್ದೇನೆ. ನಮ್ಮ ಆಸ್ಪತ್ರೆಗೆ ಒಂದೇ ಹೆಸರಿನ ಹಲವಾರು ರೋಗಿಗಳು ಬರುತ್ತಾರೆ ಎಂದರೆ ಸರಿ. ಯಾವ ರೋಗಿಗೆ ಯಾವ ಆಯುಧದಿಂದ ಪೆಟ್ಟಾಗಿತ್ತು ಎಂದು ನೆನಪಿರುವುದಿಲ್ಲ. ಗುದ್ದಲಿಗಳನ್ನು ಪರಿಶೀಲಿಸಿ ವರದಿ ನೀಡುವಂತೆ ನನಗೆ ದಿಃ 02.10.2020 ರಂದು ಮನವಿ ಬಂದಿರುತ್ತದೆ. ಯಾರು ಮನವಿ ಪತ್ರವನ್ನು ತಂದಿದ್ದರು ಎಂದರೆ ಪೊಲೀಸರು ಮದ್ಯಾಹ್ನ 12.20 ಕ್ಕೆ ತಂದಿರುತ್ತಾರೆ. ಗುದ್ದಲಿಗಳನ್ನು ಯಾವುದೇ ಕವರ್ ನಲ್ಲಿ ತರದೆ ಹಾಗೇ ಕೈಯಲ್ಲಿ ತಂದಿದ್ದರು. ನಾನು ಪರಿಶೀಲಿಸುವ ಕಾಲಕ್ಕೆ ಗುದ್ದಲಿಗಳು ಕಣ್ಣಿಗೆ ಕಾಣುವಂತೆ ಇದ್ದವು. ಗುದ್ದಲಿಯ ಮೇಲೆ ಯಾವುದಾದರು ಬರವಣಿಗೆ ಇದ್ದ ಬಗ್ಗೆ ನಾನು ನೋಡಿರುವುದಿಲ್ಲ. ನಿಪಿ-9 ನನ್ನ ಕೈ ಬರವಣಿಗೆಯಲ್ಲಿ ಇದೆ. ನಾನು ಗಾಯದ ಪ್ರಮಾಣ ಪತ್ರ ಮತ್ತು ಗುದ್ದಲಿಯನ್ನು ನೋಡಿ ನಿಪಿ-9 ನ್ನು ತಯಾರಿಸಿದ್ದೇನೆ. ಗಾಯಾಳುವಿಗೆ ಯಾವ ಗಾಯ ಆಗಿತ್ತು ಎಂದು ನಾನು ಗಾಯದ ಪ್ರಮಾಣ ಪತ್ರದಲ್ಲಿ ನಮೂದಿಸಿದ್ದೇನೆ ಆದರೆ ನಿಪಿ-9 ರಲ್ಲಿ ನಮೂದಿಸಿರುವುದಿಲ್ಲ. ಚಾಸಾ-1 ರವರ ಗಾಯಗಳನ್ನು ತಾಳೆ ಮಾಡಿ ನಿಪಿ-9 ನ್ನು ಬರೆಯಲಾಗಿದೆ ಎಂದು ನಿಪಿ-9 ರಲ್ಲಿ ನಮೂದು ಇಲ್ಲ ಎಂದರೆ ಅದನ್ನು ಪರಿಶೀಲಿಸಿ ಬರೆದಿದ್ದೇನೆ. ಚಾಸಾ-1 ಮತ್ತು 2 ರವರಿಗೆ ಆದ ಯಾವಾಗ ಆದ ಗಾಯಗಳು ನಾನು ಪರಿಶೀಲಿಸಿದ ಗುದ್ದಲಿಗಳಿಂದ ಆಗಿದೆ ಎಂದು ನಿಪಿ-9 ರಲ್ಲಿ ನಮೂದು ಇಲ್ಲ ಎಂದರೆ ಸರಿ. ನಾನು ಪರಿಶೀಲಿಸಿದ ಗುದ್ದಲಿಗಳು ಸಂಪೂರ್ಣ ಕಬ್ಬಿಣದಿಂದ ಕೂಡಿತ್ತಾ ಅಥವಾ ಭಾಗಶಃ ಮರದಿಂದ ಕೂಡಿತ್ತಾ ಎಂದು ನಾನು ನಮೂದಿಸಿಲ್ಲ ಎಂದರೆ ಸರಿ. ನಾನು ಬರವಣಿಗೆ ಬರೆದ ಕೊನೆಯ ಭಾಗದಲ್ಲಿ ಬರವಣಿಗೆಯ ಒತ್ತಿಗೆ ಸಹಿ ಮಾಡಿ ಸೀಲು ಮಾಡುತ್ತೇನೆ ಎಂದರೆ ಸರಿ. ನಿಪಿ-9 ರಲ್ಲಿ ಹಲವಾರು ಸಾಲುಗಳು ಬರೆಯುವಷ್ಟು ಜಾಗ ಖಾಲಿ ಇದೆ ಆನಂತರ ಸಹಿ ಮಾಡಲ್ಪಟ್ಟಿದೆ ಎಂದರೆ ಸರಿ. ಗುದ್ದಲಿಗಳನ್ನು ಪರಿಶೀಲಿಸಿದ ನಂತರ ನಾನು ಪೊಲೀಸರಿಗೆ ವಾಪಾಸ್ಸು ಕೊಟ್ಟಿರುತ್ತೇನೆ. ಪೊಲೀಸರು ನನ್ನ ಮುಂದೆ ಗುದ್ದಲಿ ಹಾಜರು ಪಡಿಸಿದ್ದಕ್ಕೆ ಹಾಗೂ ಮತ್ತೆ ವಾಪಾಸ್ಸು ಕೊಟ್ಟಿದ್ದಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಗಳು ಹೇಳುತ್ತಾರೆ ನಾನು ಯಾವುದೇ ಗುದ್ದಲಿಗಳನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಶೀಲನೆ ಮಾಡಿಲ್ಲ, ವರದಿ ನೀಡಿಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಕೋರಿಕೆಯ ಮೇರೆಗೆ ಸಹಿ

ಮಾಡಿ ಸೀಲು ಮಾಡಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಆದ್ದರಿಂದ ನಿಪಿ-9 ರಲ್ಲಿ ಹಲವಾರು ಸಾಲುಗಳು ಬರೆಯುವಷ್ಟು ಜಾಗ ಖಾಲಿ ಇದೆ ಎಂದರೆ ಸರಿಯಲ್ಲ. ನಾನು ಗುದ್ದಲಿಗಳನ್ನು ಪರಿಶೀಲನೆ ಮಾಡದ ಕಾರಣ ಪ್ರಕರಣ ಸಂಖ್ಯೆ ಮತ್ತು ಪಿ ಎಫ್ ಸಂಖ್ಯೆಯನ್ನು ನಿಪಿ-9 ರಲ್ಲಿ ನಮೂದಿಸಿಲ್ಲ ಎಂದರೆ ಸರಿಯಲ್ಲ. ನಿಪಿ-9 ಕ್ಕೂ ಮತ್ತು ಎಂಒ ಗಳಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ-9 ರಲ್ಲಿ ಗುದ್ದಲಿಯ ಯಾವ ಭಾಗದಿಂದ ಹೊಡೆದರೆ ಯಾವ ಗಾಯ ಆಗುತ್ತದೆ ಎಂದು ನಮೂದಿಸಿಲ್ಲ ಎಂದರೆ ಸರಿ. ಎಂಒ-1 ಮತ್ತು 2 ರಿಂದ ಹಲ್ಲೆ ಮಾಡಿದರೆ ನಾನು ಹೇಳಿದಂತ ಗಾಯಗಳು ಸಾಧ್ಯತೆ ಇಲ್ಲ ಎಂದರೆ ಸರಿಯಲ್ಲ. ನಾನು ಪೊಲೀಸರ ಕೋರಿಕೆಯ ಮೇರೆಗೆ ಸುಳ್ಳು ದಾಖಲೆಗಳನ್ನು ಕೊಟ್ಟು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ. ಹೇ. ಕೇ. ಸರಿ ಇದೆ.
ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ. ಎಂ. ಎಫ್. ಸಿ, ಮಡಿಕೇರಿ.**